ಕೃಷಿ ಮೇಳದ ವಸ್ತು ಪ್ರದರ್ಶನದಲ್ಲಿ ವಿವಿಧ ಬಗೆಯ ಎಳನೀರು ಪ್ರದರ್ಶನ

# ಕಣ್ತುಂಬಿದ ಪ್ರದರ್ಶನ, ಮನ ತಟ್ಟಿದ ಮಾಹಿತಿ

ಪ್ರಜಾವಾಣಿ ವಾರ್ತೆ

ವಿಟ್ಲ: ವಿಟ್ಲ ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯಲ್ಲಿ (ಸಿಪಿಸಿಆರ್‌ಐ) ಶನಿವಾರ ನಡೆದ ಕೃಷಿ ಮೇಳದಲ್ಲಿ ಆಯೋಜಿಸಲಾದ ಕೃಷಿ ವಸ್ತು ಪ್ರದರ್ಶನ ಕೃಷಿಕರ ಗಮನ ಸೆಳೆ ಯಿತು. ತಜ್ಞರಿಂದ ಸಾಕಷ್ಟು ಕೃಷಿ, ತೋಟಗಾರಿಕಾ ಮಾಹಿತಿಯೂ ಲಭಿಸಿತು.

ಒಂದೆಡೆ ಕೃಷಿ ಬಗ್ಗೆ ಜಾಗೃತಿ ಮೂಡಿಸುವ ಬಗ್ಗೆ ಮಾರ್ಗದರ್ಶನ ನೀಡುತ್ತಿದ್ದರೆ, ಇನ್ನೊಂದೆಡೆ ಅದಕ್ಕೆ ಪೂರಕ ಎಂಬಂತೆ ಕೃಷಿಗೆ ಸಂಬಂಧಿಸಿದ ವಸ್ತು ಪ್ರದರ್ಶನದ ವಿವಿಧ ಮಳಿಗೆಗಳು ರೈತರ ಮುಖದಲ್ಲಿ ಮಂದಹಾಸ ಮೂಡಿಸಿದವು.

ಶಿವಮೊಗ್ಗದ ಹೇರ್ಳೆ ಟೆಕ್ನಿಕಲ್ ಮತ್ತು ರಿಸರ್ಚ್ ವರ್ಕ್ಸ್ ವತಿಯಿಂದ ಪ್ರದರ್ಶಿಸಲಾದ ಮರ ಏರುವ ಯಂತ್ರ ಕೃಷಿಕರನ್ನು ಸೆಳೆಯಿತು. ಕಾಸರಗೋಡು ಕೃಷಿ ವಿಜ್ಞಾನ ಕೇಂದ್ರ (ಕೆ.ವಿ.ಕೆ) ವತಿಯಿಂದ ಚಕ್ಕುಲಿ, ಉಂಡೆ, ಚಟ್ನಿ ಹುಡಿ ಮೊದಲಾದ ತಿಂಡಿಗಳ ಮಾರಾಟ ಹಾಗೂ ಪ್ರದರ್ಶನ ನಡೆಯಿತು. ಕಾಸರಗೋಡಿನ ತೋಟದ ಬೆಳೆಗಳ ಸಂಶೋಧನಾ ಕೇಂದ್ರ (ಸಿಪಿಸಿಆರ್‌ಐ)ದಿಂದ ಹಲಸಿನ ವಿವಿಧ ವಸ್ತುಗಳು ಪ್ರದರ್ಶನಗೊಂಡಿತು. ಮಂಗಳೂರಿನ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಹಲಸಿನ ರಸ ಹಾಗೂ ಮೌಲ್ಯವರ್ಧಿತ ಉತ್ಪನ್ನಗಳು ರೈತರ ಗಮನ ಸೆಳೆದವು.

ಮಡಿಕೇರಿಯ ಸಂಬಾರ ಬೆಳೆಗಳ ಸಂಶೋಧನಾ ಸಂಸ್ಥೆಯಿಂದ ಲವಂಗ, ಕಾಳು ಮೆಣಸು, ಏಲಕ್ಕಿ ಪ್ರದರ್ಶನಗೊಂಡವು. ಬಾಗಲಕೋಟೆ ತೋಟಗಾರಿಕಾ ವಿಜ್ಞಾನಗಳ ವಿ.ವಿ. ವತಿಯಿಂದ ಚಾಲಿ ಅಡಿಕೆ, ಕೆಂಪು ಅಡಿಕೆ, ಹಾಲುಕೆಸು (ಶಿರಸಿ) ಪ್ರದರ್ಶನಗೊಂಡವು. ಬಿಲ್ಲಂಪದವು ನಾರಾಯಣ ಭಟ್ ಅವರಿಂದ (ಬೀಜಸಿರಿ ಸಾವಯವ ಕೃಷಿ) ) ಸುಮಾರು 44 ಬಗೆಯ ಬೀಜಗಳ ಮಾರಾಟ ಹಾಗೂ ಪ್ರದರ್ಶನ ನಡೆಯಿತು.

ಗಮನ ಸೆಳೆದ ಎಳನೀರು ಪ್ರದರ್ಶನ: ಸಭಾಂಗಣದ ಪ್ರವೇಶ ದ್ವಾರದ ಬಳಿ ವಿವಿಧ ಬಗೆಯ ಎಳನೀರು ಪ್ರದರ್ಶನ ಈ ಕೃಷಿಮೇಳಕ್ಕೆ ಮೆರಗು ನೀಡಿತು. ಈ ಮೇಳದಲ್ಲಿ ಚವಗಾಟ್, ಕಲ್ಪ ವೃಕ್ಷ, ಎಸ್‌ಎಸ್ ಅಪ್ರಿಕೋಡ್, ಗಂಗಾ ಬೊಂಡಮ್, ಸಂಟ್ರಮನ್, ಪ್ರಥಫ್, ಪ್ರಣಮಾ ಟಲ್, ಕಲ್ಪ ಪ್ರತಿಭಾ, ಕಲ್ಪ ಮಿತ್ರ, ಫಿನ್ನಾರಾಯಿಟಲ್, ಟಿಪ್ಟುರ್ ಮೊದಲಾದ ಎಳನೀರು ಪ್ರದರ್ಶನ ಜನಮನ ಗೆದ್ದವು.

ಅದೇ ರೀತಿ ವಿವಿಧ ರೀತಿಯ ಅಡಿಕೆಗಳ ಪ್ರದರ್ಶನ ಜೋರಾಗಿತ್ತು. ಅದರಲ್ಲಿ ಕಾಲಾಪೇರಿಯಾ, ಮಧುರಾಮಂಗಳ, ಸ್ವರ್ಣಮಂಗಳ,. ಸುಮಂಗಳ, ಶ್ರೀಮಂಗಳ, ಮೋಹಿತ್ನಗರ, ಮಂಗಳ ಮೊದಲಾದ ತಳಿಯ ಅಡಿಕೆಗಳ ಮಾರಾಟ ಇತ್ತು.

ಎಲ್ಲೆಡೆ ನಿರಂತರವಾಗಿ ಇದೇ ರೀತಿಯ ಕೃಷಿ ಮೇಳ ನಡೆಯುತ್ತಿದ್ದರೆ ರೈತರು ಹಾಗೂ ಕೃಷಿಕರು ತಮ್ಮ ಕ್ಷೇತ್ರದಲ್ಲಿ ಇನ್ನಷ್ಟು ಸಾಧನೆ ಮಾಡಬಹುದು ಎಂಬ ಅಭಿಪ್ರಾಯ ವ್ಯಕ್ತವಾಯಿತು.

-ಮಹಮ್ಮದ್ ಅಲಿ ವಿಟ್ಲ





ವಿಟ್ಲ ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯಲ್ಲಿ ಶನಿವಾರ ನಡೆದ ಕೃಷಿ ಮೇಳದಲ್ಲಿ ಭಾಗವಹಿಸಿದ್ದ ಕೃಷಿಕರು.

## ಕೊಳೆರೋಗ-ಮುಗಿಯದ ಸಂಶೋಧನೆ

ವಿಟ್ಲ: 'ಅಡಿಕೆ ಕೊಳೆರೋಗಕ್ಕೆ ಸಿಂಪಡಿಸುವ ಬೋರ್ಡೋ ದ್ರಾವಣದ ಗುಣಮಟ್ಟದ ಬಗ್ಗೆ ಅನುಮಾನಗಳಿದ್ದರೆ ಬೆಳೆಗಾರರು ಮೈಲುತುತ್ತನ್ನು ಸಿಪಿಸಿಆರ್‌ಐ ವಿಟ್ಲ ಲ್ಯಾಬ್‌ಗೆ ತಂದರೆ ಅದರ ಗುಣಮಟ್ಟವನ್ನು ಸಮಗ್ರವಾಗಿ ಪರಿಶೀಲನೆ ಮಾಡಬಹುದು. ಬಯೋ ಉತ್ಪನ್ನಗಳನ್ನು ನಮ್ಮ ಸಿಪಿಸಿಆರ್‌ಐ ತೋಟದಲ್ಲೇ ಬಿಟ್ಟು ಪ್ರಯೋಗ ನಡೆಸೋಣ. ಅಡಿಕೆ ಕೊಳೆರೋಗ ಸಿಂಪಡಣೆಗೆ ಸಂಸ್ಥೆಯಿಂದ ಯಂತ್ರವನ್ನು ಅಭಿವೃದ್ಧಿ ಪಡಿಸಲಾಗಿದೆ. ಮಾರ್ಚ್‌ನಲ್ಲಿ ಕೊಳೆರೋಗದ ಬಗ್ಗೆ ಸಂವಾದ ನಡೆಸಿ ಒಂದು ತೀರ್ಮಾನಕ್ಕೆ ಬರೋಣ. ಕೊಳೆರೋಗದ ಬಗ್ಗೆ ಸಂಸ್ಥೆಯಿಂದ ಸಂಶೋಧನೆ ನಡೆಯುತ್ತಿದ್ದು, ಇನ್ನೂ ಪ್ರಾರಂಭಿಕ ಹಂತದಲ್ಲಿದೆ. ಸ್ವಲ್ಪ ಸಮಯದ ಅವಕಾಶವನ್ನು ಸಂಸ್ಥೆಗೆ ನೀಡಿ' ಎಂದು ವಿಜ್ಞಾನಿಗಳು ಮನವಿ ಮಾಡಿದರು.

ತೋಟಗಳಲ್ಲಿ ಮಂಗನ ಹಾವಳಿ ನಿಯಂತ್ರಣದ ಬಗ್ಗೆ ನಿಲೇಶ್ ಪ್ರಭು ಮಾಹಿತಿ ನೀಡಿದರು. ಸಂವಾದದಲ್ಲಿ ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಪಿ ಚೌಡಪ್ಪ, ಕೊಚ್ಚಿ ಗೇರು ಮತ್ತು ಕೊಕ್ಕೋ ಅಭಿವೃದ್ಧಿ ನಿರ್ದೇಶನಾಲಯದ ನಿರ್ದೇಶಕ ಡಾ. ವೆಂಕಟೇಶ್ ಎನ್ ಹುಬ್ಬಳ್ಳಿ, ಪುತ್ತೂರು ಗೇರು ಸಂಶೋಧನಾ ನಿರ್ದೇಶನಾಲಯದ ಹಿರಿಯ ವಿಜ್ಞಾನಿ ಡಾ. ಗಂಗಾಧರ್ ನಾಯಕ್, ಡಾ. ಅಂಕೇ ಗೌಡ, ಡಾ. ಕೆ ಎಸ್ ಆನಂದ, ಡಾ. ರವಿ ಭಟ್, ಡಾ. ಎಸ್ ಸುಜಾತ, ಡಾ. ಹೆಚ್ ಪಿ ಮಹೇಶ್ವರಪ್ಪ, ಡಾ. ವಿನಾಯಕ ಹೆಗ್ಡೆ, ಡಾ. ಕೆ ಬಿ ಹೆಬ್ಬಾರ ಮತ್ತಿತರರು ಇದ್ದರು.

## ಸಹಾಯಧನಕ್ಕಾಗಿ ಅರ್ಜಿ

ಉಡುಪಿ: ಜಿಲ್ಲಾ ಪಶುಪಾಲನಾ ಇಲಾಖೆಯು 2014–15ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಆಧುನಿಕ ಹೈನುಗಾರಿಕೆಯನ್ನು ಅನುಸರಿಸಲು ಜಿಲ್ಲೆಯ ಒಟ್ಟು 3 (1 ಪರಿಶಿಷ್ಟ ಜಾತಿಗೆ ಮೀಸಲು) ಫಲಾನುಭವಿಗಳಿಗೆ ಶೇ 50ರಷ್ಟು ಸಹಾಯಧನ ನೀಡಲಿದೆ.

ಆದ್ದರಿಂದ ಆಸಕ್ತ ಫಲಾನುಭವಿಗಳು ಜ. 20ರೊಳಗೆ ತಾಲ್ಲೂಕಿನ ಸಹಾಯಕ ನಿರ್ದೇಶಕರು, ಪಶು ವೈದ್ಯಕೀಯ ಆಸ್ಪತ್ರೆ, ಉಡುಪಿ, ಕುಂದಾಪುರ ಮತ್ತು ಕಾರ್ಕಳ ಸಂಪರ್ಕಿಸಿ ಅರ್ಜಿ ನಮೂನೆ ಪಡೆದು ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

**COFFEE ESTATE IN CHIKMAGALUR**

**REQUIRES**

**FIELD STAFF**

With minimum 10 years work experience in a large coffee estate.
Age: Between 30 - 45yrs
Excellent facilities provided.
Salary may be discussed during the interview.

**Send Resume with passport size photograph to:**

'The Proprietor', Rosedale Estates
Hanthur Post, Mudigere – 577132
Chikmagalur District

